# ದೇಹಲೋಕ–ಭಾವಲೋಕಗಳ ಘರ್ಷಣೆಯಲ್ಲಿ ಸ್ಫೋಟಗೊಳ್ಳುವ ಜೀವನಸತ್ಯದ ಕಿಡಿಗಳು



**ಪದ್ಮನಾಭ ಭಟ್ ಶೇವ್ಕಾರ**

‘ಲೋಕಾನು ದೊಡ್ಡುದಲ್ಲಾ... ನರಮನುಸ್ಯ ದೊರಿಯಲ್ಲಾ...’ ಹೀಗೆ ಹಾಡುತ್ತ ತನ್ನ ಪಕ್ಕದಲ್ಲೇ ತೂರಾಡಿಕೊಂಡು ಸಾಗಿದ ಅವನನ್ನು ಸುಮನ ಆಪ್ಯಾಯಮಾನವಾಗಿ ನೋಡತೊಡಗಿದಳು. ಒಳಗೆ ಇಳಿಸಿಕೊಂಡಿದ್ದ ವೈನಿನ ಮತ್ತಿಗೆ ಅವನು ಸುಂದರವಾಗಿ ಕಾಣುತ್ತಲಿದ್ದ. ಕೆದರಿದ ಕೂದಲು, ಉದ್ದಕ್ಕೆ ಬೆಳೆದ ಗಡ್ಡ, ಸೀಗೆ ಪೊದೆಯಂತೆ ಅಡ್ಡಾದಿಡ್ಡಿ ಬೆಳೆದಿರುವ ಮೀಸೆ, ಮಾಸಲು ಬಟ್ಟೆ, ನೀರನ್ನೇ ಕಾಣದ ಕೊಳಕು ಮೈ...’

ಚೀಮನಹಳ್ಳಿ ರಮೇಶಬಾಬು ಅವರ ‘ಮಂಪರು’ ಕಾದಂಬರಿ ಶುರುವಾಗುವುದು ಹೀಗೆ. ಕಥಾನಾಯಕಿ ಸುಮನಳಿಗೆ ಕುಡಿದ ಮತ್ತಿನಲ್ಲಿ ಹಾಡುತ್ತ ಹೊರಟಿರುವ ಪರಮಕೊಳಕ ನೋಟದ ಭಿಕಾರಿ ಸುಂದರವಾಗಿ ಕಾಣುತ್ತಾನೆ! ಮತ್ತೆ ಅವನು ಸುಂದರವಾಗಿ ಕಾಣಲಿಕ್ಕೆ ಅವಳು ಒಳಗೆ ಇಳಿಸಿಕೊಂಡಿದ್ದ ವೈನಿನ ಮತ್ತು ಕಾರಣ ಎಂಬ ಸಾಲೂ ಅಲ್ಲಿದೆ. ಆದರೆ, ಅದು ಅಷ್ಟೇ ಅಲ್ಲ ಎಂಬುದು ಮುಂದಿನ ವಿವರಣೆಗಳಲ್ಲಿ ತೆರೆದುಕೊಳ್ಳುತ್ತ ಹೋಗುತ್ತದೆ. ಅವಳು ಈಗಷ್ಟೇ ಮತ್ತೊಂದು ಪ್ರಪಂಚದಿಂದ ‘...ಮೈ ಫುಟ್’ ಎಂದು ಹೇಳಿ ಹೊರಬಂದಿದ್ದಾಳೆ. ಆ ಪ್ರಪಂಚವೋ ಪರಮನಾಗರಿಕವಾಗಿ ಕಾಣಿಸುವ ಪ್ರಪಂಚ. ಬಹುಶಿಸ್ತಿನ ಭಾಷೆಯ, ಸಭ್ಯಸ್ಥರಿಗಾಗಿ, ಸಭ್ಯಾಚಾರಗಳ ಅಡಿಗಲ್ಲ ಮೇಲೆಯೇ ಕಟ್ಟಲಾಗಿರುವ ಪ್ರಪಂಚ. ಅಂಥ ಪ್ರಪಂಚದಲ್ಲಿ ಅವಳ ಬಾಸ್ ಅರವಿಂದ್ ಅವಳಿಗೆ ‘ಯು ಶುಡ್ ಅಡ್ಜಸ್ಟ್ ವಿತ್ ದ ಸಿಸ್ಟಮ್’ ಎಂದು ಸುಸಂಸ್ಕೃತ ಭಾಷೆಯಲ್ಲಿ ಮೈ ಹಂಚಿಕೊಳ್ಳಲು ಕರೆಯುತ್ತಿದ್ದಾನೆ!

ಒಂದು, ಸುಸಂಸ್ಕೃತವೂ, ನಾಗರಿಕವೂ ಆಗಿ ಕಾಣಿಸುವ ಹೊರನೋಟವನ್ನು ಹೊತ್ತಿರುವ, ಆದರೆ ಒಳಗೆ ಮೈಯೆಲ್ಲ ವಿಕಾರವನ್ನೇ ತುಂಬಿಕೊಂಡಿರುವ ಜಗತ್ತು; ಇನ್ನೊಂದು ಹೊರನೋಟದಲ್ಲಿ ವಿಕಾರ, ಅಸ್ತವ್ಯಸ್ತವನ್ನು ಹೊದ್ದು ಮನುಷ್ಯ ಬದುಕಿನ ಒಳಸುಳಿಗಳ ಬಗ್ಗೆ ಮಿಂಚು ಹೊಡೆಸುವಂತೆ ಹಾಡಬಲ್ಲವನ ಜಗತ್ತು. ಹೀಗೆ ಒಳಗಿನ ಕೊಳೆ ಮತ್ತು ಹೊರಗಿನ ಕೊಳೆಗಳನ್ನು ಮುಖಾಮುಖಿಯಾಗಿಸುವುದರ ಮೂಲಕವೇ ಕಥೆ ಪ್ರಾರಂಭವಾಗುತ್ತದೆ. ಈ ಮುಖಾಮುಖಿ ಆಕಸ್ಮಿಕವಾದದ್ದಲ್ಲ ಅಥವಾ ಚಿಲ್ಲರೆ ಚಮತ್ಕಾರಕ್ಕಾಗಿ ಕಟ್ಟಿದ್ದೂ ಅಲ್ಲ. ಒಳ-ಹೊರಗಿನ ಜಗತ್ತುಗಳು ಈ ಕಾದಂಬರಿಯುದ್ದಕ್ಕೂ ಬೇರೆ ಬೇರೆ ಬಗೆಯಲ್ಲಿ ಮತ್ತೆ ಮತ್ತೆ ಮುಖಾಮುಖಿಯಾಗುತ್ತ ಹೋಗುತ್ತವೆ. ಒಳಿತು-ಕೆಡುಕು, ನೈತಿಕ-ಅನೈತಿಕ, ದೇಹ-ಮನಸ್ಸು, ಸಾಮಾಜಿಕ ಮೌಲ್ಯಗಳು-ನಿಸರ್ಗಸಹಜ ನಡೆಗಳು, ಸಂಸ್ಕೃತಿ-ಪ್ರಕೃತಿ, ರಕ್ತಸಂಬಂಧಗಳು-